ಮುದ್ದು, ತೀರ್ಥಹಳ್ಳಿ
*ಸರ್ಕಾರವೆಂದರೆ ಯಾರು ಬೇಕಾದರೂ ಕಲ್ಲು ಹೊಡೆದು ಹೋಗಬಹುದಾದ ಗಾಜಿನ ಮನೇನಾ...?*



ಅಲ್ಲ; ಸರ್ಕಾರವೆಂದರೆ ಯಾರು ಬೇಕಾದರೂ ಕೊಳ್ಳೆ ಹೊಡೆದು ಹೋಗಬಹುದಾದ ಮೋಜಿನ ಮನೆ!

ಜೆ.ಸಿ.ರವಿಕುಮಾರ್, ಜಯಸುವರ್ಣಪುರ
*ನಮ್ಮ ಮನೆಯ ಹೆಂಡತಿ ಅತಿ ಸುಂದರಳಾಗಿ ಕಾಣುವುದು ಯಾವ ಸಂದರ್ಭದಲ್ಲಿ?*
ಹೊಸ ಬೇಡಿಕೆ ಮುಂದಿಡುವ ಸಂದರ್ಭದಲ್ಲಿ!

ಸೋಮಶೇಖರ್, ಎಲೆಮುದ್ದನಹಳ್ಳಿ
*ಬಾಲಿವುಡ್ ನಟ ಸಂಜಯ್‌ದತ್‌ಗೆ ದೆವ್ವಗಳ ಕಾಟ ಇದೆಯಂತಲ್ಲಾ...?*
ಶುದ್ಧ ಸುಳ್ಳು; ಎಲ್ಲೋ ಕನ್ನಡಿ ನೋಡಿ ಬೆಚ್ಚಿಬಿದ್ದಿರಬೇಕಷ್ಟೆ!

ಡ್ರೈರಿ ವಿಶ್ವನಾಥ್, ಬೆಂಗಳೂರು
*ನಿಜವಾದ ಗುರು ಯಾರು?*
ಗುರಿ ಇರುವವನು!

ಬಿ.ಎನ್. ಸೊಲ್ಲಾಪುರ, ಬೀದರ್
*ಕಾಡಿನಲ್ಲಿರುವ ಬೇಟೆಗಾರನಿಗೂ, ವಿಧಾನಸೌಧದಲ್ಲಿರುವ ಜನಪ್ರತಿನಿಧಿಗೂ ಏನು ವ್ಯತ್ಯಾಸವಿದೆ ಗುರು?*




ಅವನ ಗುರಿ ಪಕ್ಷಿಯಿಂದ ಪಕ್ಷಿಯತ್ತ, ಇವನ ಗುರಿ ಪಕ್ಷದಿಂದ ಪಕ್ಷದತ್ತ!

ಬಸವರಾಜ ಎಂ. ಹಳಿಮನಿ, ಬಿಜಾಪೂರ
*ಹದಿನಾರು ಸಾವಿರ ಕನ್ಯೆಯರ ಮನ ಗೆದ್ದ ಶ್ರೀಕೃಷ್ಣ ಮತ್ತೆ ಕಲಿಯುಗದಲ್ಲಿ ಹುಟ್ಟಿ ಬಂದರೆ ಏನಾಗಬಹುದು ಸಾರ್?*
ಸೂಪರ್ ಕೊಳಲುವಾದಕ, ಹೈ ಕ್ಲಾಸ್ ಡ್ಯಾನ್ಸರ್ ಅಲ್ಲದೆ, ಅಂದಿಗಿಂತಲೂ ಹೆಚ್ಚು ಫ್ಯಾನ್‌ಗಳು ದೊರೆಯಬಹುದು!

ಕುಮಾರ ಚಲವಾದಿ, ಶಿರಸಿ
*ನೀವು ನೀಡುವ ಉತ್ತರಗಳಲ್ಲಿಯ ಸಿಕ್ಸರ್‌ಗೂ, ಕ್ರಿಸ್ ಗೇಯ್ಲ್ ಹೊಡೆಯುವ ಸಿಕ್ಸರ್‌ಗೂ ಹೇಗೆ ಸಂಬಂಧ?*
ಎರಡಕ್ಕೂ ನೀವೇ ಕಾರಣವಲ್ಲವೇ... ನಿಮ್ಮ ನಗೆ, ಪ್ರೋತ್ಸಾಹ, ಚಪ್ಪಾಳೆ ಇಲ್ಲದಿದ್ದರೆ ಆ ಅಂಗಣ, ಈ ಅಂಕಣ ಎರಡೂ ಬರಡು.

ಕೆ. ಶ್ರೀನಿವಾಸರಾವ್, ಹರಪನಹಳ್ಳಿ
*ಮೊನ್ನೆ ಇಂದ್ರ ಇ-ಮೇಯ್ಲ್ ಕಳಿಸಿದ್ದ, ಸ್ವರ್ಗದಲ್ಲಿ ರಾಜಕಾರಣಿಗಳೇ ಇಲ್ಲವಂತೆ...?*
ಅದಕ್ಕೇ ಅದನ್ನು ಸ್ವರ್ಗ ಎನ್ನುವುದು!

ಕೆ.ಎಂ. ಲಿಂಗರಾಜು, ನಂಜನಗೂಡು
*ಹೊಸ ಸರ್ಕಾರದಿಂದ ಏನನ್ನು ನಿರೀಕ್ಷಿಸಬಹುದು?*
ಹೊಸ ಸಚಿವ ಹಳೆ ಖಾತೆ ಲೂಟಿಗಿದು ಬಲು ಸೊಗಸು, ಹೊಸ ಭರವಸೆಯ ನೀಡಲಿದು ಸೂಕ್ತ ಕಾಲ, ಹೊಸ ನಿರೀಕ್ಷೆಗಳ ನೀ ಮುಂದಿಡುತ ಸಾಗುತಿರು, ನಸುಗನಸೆ ಜೀವ ನದಿ ಮಂಕುದಿಣ್ಣೆ!

ಪಿ.ಜೆ. ರಾಘವೇಂದ್ರ, ಮೈಸೂರು
*ಚಾಪೆ/ರಂಗೋಲಿಗಳ ಕೆಳಗೆ ತೂರುವುದೇ ರಾಜಕೀಯವೆ?*
ಹುಚ್ಚಪ್ಪ! ಭೂಗತ ಲೋಕದವರಿಗೆ ಚಾಪೆ, ರಂಗೋಲಿಗಳು ಲೆಕ್ಕವೇ ಅಲ್ಲ!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು
*ನಾರಿ ಮುನಿದರೆ ಮಾರಿ, ಪ್ರಕೃತಿ ಮುನಿದರೆ...?*
ಗೋರಿ.

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ಪ್ರೇಮಿಗಳು ಚುಂಬಿಸುವಾಗ ಕಣ್ಣುಗಳು ಏಕೆ ಮುಚ್ಚಿಕೊಳ್ಳುತ್ತವೆ?*
ಕಣ್ಣು ಮುಚ್ಚುವ ಕಾಲ ಬರುವವರೆಗೂ ಹೀಗೇ ಪ್ರೀತಿಸೋಣ ಎಂದು ಸೂಚಿಸಲು!

ಎಂ.ಎನ್. ಸೋಮಶೇಖರ್, ಮೈಸೂರು
*ಜೀವನದಲ್ಲಿ ಜೇನಿಗಿಂತ ಹೆಚ್ಚು ಸವಿ, ಸಿಹಿ ಯಾವುದು?*
ಮುಖಸ್ತುತಿ!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಒಂದೊಮ್ಮೆ ನೀವು ಆತ್ಮಕಥೆ ಬರೆದುಕೊಂಡರೆ ಅದಕ್ಕೆ ಏನಂತ ಹೆಸರಿಡ್ತೀರಿ ರಾಮ್?*
ನೀವು ನೋಡಿದಿರಿ!

## ಬಹುಮಾನಿತ ಪ್ರಶ್ನೆ

ನವಿರವಿ, ಬಾಳೆಹೊನ್ನೂರು
*ತಿರುಪತಿ ತಿಮ್ಮಪ್ಪ ಮದುವೆಯಾಗಲು ಮಾಡಿದ ಸಾಲ ಇನ್ನೂ ತೀರಿಲ್ಲವೆ?*
ಹೇಗೆ ಸಾಧ್ಯ? ಬಂದ ದುಡ್ಡೆಲ್ಲಾ ಪ್ರತಿದಿನ ಕಲ್ಯಾಣೋತ್ಸವಕ್ಕೆಂದು ಹೆಂಡತಿಗೆ ಸೀರೆ ಕೊಡಿಸುವುದಕ್ಕೇ ಸಾಲುತ್ತಿಲ್ಲವಂತೆ!

ಆರ್. ಮಧುಸೂದನ್, ಹಾಸನ
*ಸಿಹಿ ಚುಂಬನ, ಕಹಿ ಚುಂಬನ, ಹುಳಿ ಚುಂಬನ; ಹೀಗೆ ಚುಂಬನದಲ್ಲೂ ವೈವಿಧ್ಯತೆ ಇದೆಯಂತೆ?*
ಚುಂಬನಕ್ಕೆ ಮುನ್ನ ಕ್ರಮವಾಗಿ ಸಕ್ಕರೆ, ಕ್ವಿನೈನ್ ಮತ್ತು ಹುಣಿಸೆಹಣ್ಣು ತಿಂದಿದ್ದರೆ ಈ ವೈವಿಧ್ಯತೆಗಳು ಮೂಡುತ್ತವೆ!

ಜಾಕೋಬ್ ಡಿಸೋಜ, ಕುರುವಳ್ಳಿ
*ಭೂಮಿಯು ಅಂಡಾಕಾರವಾಗಿದೆ ಎಂದು ಓದಿದ್ದೆ. ನಿಮ್ಮ ವಿಜ್ಞಾನ ವಿಸ್ಮಯ ದಲ್ಲಿ ತಿಳಿಸಿದಂತೆ ಗೋಳಾಕಾರ ಹೇಗಾಯಿತು?*
ದಿನವೂ ಪ್ರಸಾರವಾಗುವ ಗೋಳು ಸೀರಿಯಲ್‌ಗಳ ಪ್ರಭಾವದಿಂದ ಗೋಳಾಕಾರವಾಯಿತಂತೆ!

ವಿ. ಹಮೀದ್, ವಿಟ್ಲ
*ನೋ ಎಂಟ್ರಿ ಎಂದು ಬರೆದಿರುವ ಟೀ ಶರ್ಟ್ ಹಾಕಿಕೊಂಡು ಇಲ್ಲೊಬ್ಬಳು ಸುತ್ತಾಡುತ್ತಿದ್ದಾಳಲ್ಲಾ...?*




ಪೂರ್ತಿ ಓದಿ ನೋಡಿ; ನೋ ಎಂಟ್ರಿ ಫಾರ್ ಡರ್ಟಿ ಲುಕ್ಸ್ ಆಫ್ ಡರ್ಟಿ ಮೈಂಡೆಡ್ ಪೀಪಲ್ ಎಂದಿದೆ. ಅರ್ಥವಾಯಿತೇ...?

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಕಣ್ಣೀರ ಹನಿಗೂ, ರಕ್ತದ ಹನಿಗೂ ಏನು ವ್ಯತ್ಯಾಸ?*
ಒಂದು ಸೀರಿಯಲ್‌ಗೆ ಆಧಾರ, ಇನ್ನೊಂದು ಕ್ರೈಮ್ ನ್ಯೂಸ್‌ಗೆ!

ರಮೇಶ್, ಹನುಮನಾಳು
*ದೇವರುಗಳನ್ನು ಪೂಜಿಸಿ, ಅಷ್ಟೋತ್ತರ ಪಠಿಸಿ, ಪ್ರಾರ್ಥಿಸಿದರೆ ಒಳ್ಳೆಯದಾಗುತ್ತದೆ. ಆದರೆ ದೇವರುಗಳನ್ನು ಕೆತ್ತುವ ಶಿಲ್ಪಿಗೆ...?*
ಬಾಣಸಿಗನಿಗೆ ವಾಸನೆ, ಬಂಧುಬಳಗಕ್ಕೆ ಊಟ ಎಂಬುವುದು ನಮ್ಮ ರೀತಿ, ನೀತಿ ಅಲ್ಲವೇ! ಇದೂ ಹಾಗೇ!

■ ರಾಮ್